# ಮಕ್ಕಳ ಕೃತಿಸಂಪುಟಗಳನ್ನು ಬಳಸಿ ಮೌಲ್ಯಮಾಪನ

ಶ್ರೀನಿವಾಸ ರಾವ್ ಎಂ.

ಬುನಾದಿ ಹಂತದಲ್ಲಿ (Foundational Stage) ಸೂಕ್ತವಾಗುವ ಮೌಲ್ಯಮಾಪನದ ಎರಡು ಸ್ಥೂಲವಾದ ವಿಧಾನಗಳೆಂದರೆ ಮಕ್ಕಳನ್ನು ಸೂಕ್ಷ್ಮವಾಗಿ ಗಮನಿಸುವುದು ಮತ್ತು ಅವರು ಕಲಿಕೆಯ ಅನುಭವದ ಭಾಗವಾಗಿ ಉತ್ಪಾದಿಸಿದ ಕಲಾಕೃತಿಗಳನ್ನು ವಿಶ್ಲೇಷಿಸುವುದು.

**ಮೂಲ:** National Curriculum Framework for Foundational Stage. Section 6.2 Methods and Tools of Assessment. p. 173

ಈ ಲೇಖನದಲ್ಲಿ 'ಕಲಾಕೃತಿಗಳನ್ನು ವಿಶ್ಲೇಷಿಸುವ' ಭಾಗವಾಗಿ, ನಾನು 'ಮಕ್ಕಳ ಕೃತಿಸಂಪುಟಗಳನ್ನು' ಹೇಗೆ ಸೃಷ್ಟಿಸಬಹುದು ಮತ್ತು ಅದನ್ನು ಮೌಲ್ಯಮಾಪನಕ್ಕೋಸ್ಕರ ಹೇಗೆ ಬಳಸಿ–ಕೊಳ್ಳಬಹುದು ಎಂಬುದನ್ನು ವಿವರಿಸಿದ್ದೇನೆ. ಆರಂಭಿಕ ಬಾಲ್ಯ ಶಿಕ್ಷಣದ (ECE) ಸಂದರ್ಭದಲ್ಲಿ, ಕೃತಿಸಂಪುಟ ಎಂಬುದು ಒಂದು ನಿರ್ದಿಷ್ಟ ಅವಧಿಯಲ್ಲಿ ಮಗುವೊಂದರ ಬೆಳವಣಿಗೆ, ಅಭಿವೃದ್ಧಿ ಮತ್ತು ಕಲಿಕೆಯನ್ನು ಪ್ರದರ್ಶಿಸುವ ಸಾಮಗ್ರಿ ಮತ್ತು ಪುರಾವೆಗಳ ದಾಖಲಿತ ಸಂಗ್ರಹವನ್ನು ಸೂಚಿಸುತ್ತದೆ. ಇದರ ಮೂಲ ಉದ್ದೇಶ ಮೌಲ್ಯಮಾಪನವಾಗಿದೆ. ಇದು ಮಗುವಿನ ಪರಿಸ್ಥಿತಿ ಮತ್ತು ಪ್ರಗತಿಯನ್ನು ನಿರ್ಧರಿಸಿ, ಬೋಧನೆಯನ್ನು ಸೂಚಿಸಲು ನೆರವಾಗುತ್ತದೆ ಮತ್ತು ವರದಿ ಮಾಡಲು ಮತ್ತು ಸಂವಹನಕ್ಕೆ ಮಾಹಿತಿಯನ್ನು ದೊರಕಿಸುತ್ತದೆ. ಹೆಚ್ಚುವರಿಯಾಗಿ, ಇದು ವಿಶೇಷ ಸಹಾಯದ ಅಗತ್ಯವಿರಬಹುದಾದ ಮಕ್ಕಳನ್ನು ಗುರುತಿಸಲು ಸಹಾಯ ಮಾಡುತ್ತದೆ. ಕೃತಿಸಂಪುಟಗಳು ಮಕ್ಕಳ ಸಾಮರ್ಥ್ಯಗಳು, ಆಸಕ್ತಿಗಳು ಮತ್ತು ಅಗತ್ಯಗಳ ಬಗ್ಗೆ ಒಳನೋಟವನ್ನು ಸಹ ಒದಗಿಸುತ್ತದೆ.

ಶಿಕ್ಷಕರು ಮಗುವಿನ ಕೃತಿಸಂಪುಟವನ್ನು ನಿರ್ದಿಷ್ಟ ಫಲಿತಾಂಶಗಳಿಗೆ ಸಂಬಂಧಪಟ್ಟು ವಿಶ್ಲೇಷಿಸಬೇಕು ಮತ್ತು ಸಾಮರ್ಥ್ಯಗಳ ನಿಟ್ಟಿನಲ್ಲಿ ಮಗುವಿನ ಪ್ರಗತಿಯನ್ನು ಗುರುತಿಸಿಡಬೇಕು. ಮಗುವೊಂದರ ಕೃತಿಸಂಪುಟದ ವ್ಯವಸ್ಥೆಯು ಸಾಧಿಸಬೇಕಾದ ಫಲಿತಾಂಶಗಳನ್ನು ಸ್ಪಷ್ಟವಾಗಿ ಸೂಚಿಸಬೇಕು. ಪ್ರತಿ ಮಗುವೂ ಸಂಬಂಧಪಟ್ಟ ತಮ್ಮ ಕಲಾಕೃತಿಗಳನ್ನು ಶೇಖರಿಸಲು ಅದಕ್ಕೆಂದೇ ಮೀಸಲಿಟ್ಟಿರುವ ಕಡತಕೋಶವೊಂದನ್ನು ಹೊಂದಿರ–ಬೇಕು.

**ಮೂಲ:** National Curriculum Framework for Foundational Stage. Section 6.2 Methods and Tools of Assessment. P.178

## ಮಕ್ಕಳ ಕೃತಿಸಂಪುಟದ ಮುಖ್ಯ ಅಂಶಗಳು

1. ಕೃತಿಸಂಪುಟದ ಸಾಮಗ್ರಿಗಳು ವಯಸ್ಸು, ಮಕ್ಕಳ ಬೆಳವಣಿಗೆ ಮತ್ತು ಕಾರ್ಯಕ್ರಮಗಳು ಹಾಗೂ ಪಠ್ಯಕ್ರಮಗಳ ಗುರಿಗಳಿಗೆ ಅನುಸಾರವಾಗಿ ಬದಲಾಗುತ್ತವೆ. ಈ ಸಾಮಗ್ರಿಗಳು ಮಾಹಿತಿಪೂರ್ಣವಾಗಿದ್ದು, ಸಂಗ್ರಹಿಸಲು ಸುಲಭವಾಗಿರಬೇಕು ಮತ್ತು ತರಗತಿಯ ಅರ್ಥಪೂರ್ಣ ಚಟುವಟಿಕೆಗಳ ಪ್ರತಿನಿಧಿಗಳಾಗಿರಬೇಕು. ಈ ಕೆಳಗಿನವುಗಳು ಕೃತಿಸಂಪುಟದಲ್ಲಿ ಸಂಗ್ರಹಿಸಿಡಬಹುದಾದ ಸೂಚಿತ ಸಾಮಗ್ರಿಗಳಾಗಿವೆ. ಮೂಲ ಮತ್ತು ಸಾಮಾನ್ಯ ವೈಯಕ್ತಿಕ ಮಾಹಿತಿ: ಮಗುವಿನ ಹೆಸರು ಮತ್ತು ಮಗು ಹುಟ್ಟಿದ ದಿನಾಂಕ, ಪೋಷಕರ ಹೆಸರು ಮತ್ತು ಅವರ ಹಿನ್ನೆಲೆ, ಮಾಹಿತಿ, ಮಗುವಿನ ಹಿರಿ/ಕಿರಿಯ ಒಡಹುಟ್ಟಿದವರು, ಮಗು ಇಷ್ಟಪಡುವ ಮತ್ತು ಇಷ್ಟಪಡದೇ ಇರುವ ಸಂಗತಿಗಳು, ಸಾಂಸ್ಕೃತಿಕ ಹಿನ್ನೆಲೆ, ಇತ್ಯಾದಿಗಳಂತಹ ಮೂಲ ವಿವರಗಳು.

2. ಆರೋಗ್ಯ ಸಂಬಂಧಿ ಮಾಹಿತಿ : ಮುಖ್ಯ ಆರೋಗ್ಯ ಸೂಚಕಗಳಾದ, ಎತ್ತರ, ತೂಕ, ಬೆಳವಣಿಗೆ, ಪ್ರತಿರಕ್ಷಣೆಗಳಿಗೆ ಸಂಬಂಧಿಸಿದಂಥ ಮಗುವಿನ ಅರೋಗ್ಯ ಮತ್ತು ಯೋಗಕ್ಷೇಮದ ಒಂದು ವಿವರ.

3. ಚಟುವಟಿಕೆ ಪುಸ್ತಕಗಳು ಮತ್ತು ಕೆಲಸದ ಮಾದರಿಗಳು: ಶ್ರೇಣೀಕೃತ ಚಟುವಟಿಕೆ ಪುಸ್ತಕಗಳು ಮತ್ತು ಅಭ್ಯಾಸ ಹಾಳೆಗಳು: ಕಡತ (file) ಅಥವಾ (ಕೂಲಾಜ್ ಪುಸ್ತಕ) ತೇಪೆಪುಸ್ತಕದಲ್ಲಿ ಸಂಗ್ರಹಿತವಾದ ಚಿತ್ರ, ವರ್ಣಚಿತ್ರ, ಅಂಟುಚಿತ್ರ, (ಕೂಲಾಜ್ ಪುಸ್ತಕ) ತೇಪೆಚಿತ್ರ ಮತ್ತು ಚಟುವಟಿಕೆಯ ಛಾಯಾಚಿತ್ರಗಳಂತಹ ಮಗುವಿನ ತರಗತಿ ಕೆಲಸ.

4. ಮೌಲ್ಯಮಾಪನದ ಸಾಧನಗಳು: ಅವಲೋಕನದ ದಾಖಲೆಗಳು, ಪರಿಶೀಲನಾಪಟ್ಟಿಗಳು, ಉಪಾಖ್ಯಾನ ದಾಖಲೆಗಳು, ಸಮಯ ಮತ್ತು ಕಾರ್ಯಕ್ರಮದ ಮಾದರಿಗಳು.

5. ಡಿಜಿಟಲ್ ಸಂಪನ್ಮೂಲಗಳು: ಗಮನಾರ್ಹವಾದ ಕೆಲಸ ಅಥವಾ ಆಟದಲ್ಲಿ ಮಗ್ನವಾಗಿರುವ ಮಗುವಿನ ಛಾಯಾಚಿತ್ರಗಳು ಅಥವಾ ವಿಡಿಯೋಗಳು.

6. ಶಿಕ್ಷಕರ ಪರ್ಯಾಲೋಚನೆಗಳು: ಭವಿಷ್ಯದ ಬೆಳವಣಿಗೆ ಮತ್ತು ಕಲಿಕೆಯ ಅವಕಾಶಗಳನ್ನು ಯೋಜಿಸಲು ಸಹಾಯ ಮಾಡುವ, ಕಾಲಕ್ರಮದಲ್ಲಿ ಮಗುವಿನ ಬಗ್ಗೆ ಸಂಗ್ರಹ ಮಾಡಿದ ಮಾಹಿತಿಯ ಮೇಲೆ ಶಿಕ್ಷಕರ ಪರ್ಯಾಲೋಚನೆ.

7. ಸಮಗ್ರ ಪ್ರಗತಿ ಪತ್ರ (Holistic Progress Card -HPC)): ಎನ್.ಇ.ಪಿ 2020 H P C ಯು "ಕಲಿಕಾರ್ಥಿಯ ಗ್ರಹಣಶಕ್ತಿಯ, ಭಾವನೆಗಳನ್ನು ಪ್ರಭಾವಿಸುವ ಮತ್ತು ಮನೋಶ್ಚಾಲಕ (psychomotor) ಕ್ಷೇತ್ರಗಳ ಅನನ್ಯತೆ–ಯನ್ನು ಮತ್ತು ಪ್ರಗತಿಯನ್ನು ಬಹಳ ವಿವರಪೂರ್ಣವಾಗಿ ಪ್ರತಿಬಿಂಬಿಸುವ ಬಹು ಆಯಾಮದ ಒಂದು ವರದಿಯಾಗಿದೆ". (ಪ್ಯಾರಾ 4.35). ಅದು ಕೇವಲ ಶಿಕ್ಷಕರಿಂದ ಮಾಡಲಾದ ಮೌಲ್ಯಮಾಪನವನ್ನಷ್ಟೇ ಅಲ್ಲದೆ, ಪೋಷಕರು ಮಾಡುವಂಥ ಅವಲೋಕನ, ಟಿಪ್ಪಣಿಗಳನ್ನೂ ಮತ್ತು ಮಕ್ಕಳೇ ಮಾಡುವ ಸರಳವಾದ ಸ್ವ–ಮೌಲ್ಯಮಾಪನಗಳನ್ನೂ ಹೊಂದಿರುತ್ತದೆ.

## ಮಕ್ಕಳ ಕೃತಿಸಂಪುಟದ ವ್ಯವಸ್ಥಿತ ಜೋಡಣೆ

ಇದರ ಸಾಮಗ್ರಿಗಳು ಮತ್ತು ಕೆಲಸದ ಮಾದರಿಗಳು ಭಾಷೆ, ಗ್ರಹಣಶಕ್ತಿಯ, ಸಮಾಜೋ–ಭಾವನಾತ್ಮಕ, ಸೃಜನಶೀಲ, ಭೌತಿಕ ಮತ್ತು ದೈಹಿಕ ಯೋಗಕ್ಷೇಮ – ಈ ಎಲ್ಲಾ ಕ್ಷೇತ್ರಗಳನ್ನೂ ವ್ಯಾಪಿಸಬೇಕಾಗುತ್ತದೆ. ಈ ಕೆಲಸದ ಮಾದರಿಗಳನ್ನು ಕ್ಷೇತ್ರಕ್ಕನುಗುಣವಾಗಿ ಮತ್ತು ಕಾಲಾನುಕ್ರಮಕ್ಕೆ ತಕ್ಕಂತೆ ಜೋಡಿಸುವುದು ಮುಖ್ಯವಾಗುತ್ತದೆ. ಶಿಕ್ಷಕರು ದಿನಾಂಕ ಮತ್ತು ತಮ್ಮ ಕೆಲಸದ ಬಗ್ಗೆ ಮಗುವಿನ ನಿರೂಪಣೆಯನ್ನು ಕಾಪಿಡಬೇಕಾಗುತ್ತದೆ. ಈ ಕೆಳಗೆ ಮಕ್ಕಳು ತಾವು ಮಾಡಿರುವ ಕೆಲಸದ ಬಗ್ಗೆ ಪರ್ಯಾಲೋಚಿಸಿ ಮಾತನಾಡಲು ಸಹಾಯವಾಗುವ, ಶಿಕ್ಷಕರು ಕೇಳಬಹುದಾದ ಕೆಲ ಮಾದರಿ ಪ್ರಚೋದನೆಗಳು/ಪ್ರಶ್ನೆಗಳನ್ನು ಕೊಡಲಾಗಿದೆ.

1. ನೀನು ಇಲ್ಲಿ ಮಾಡಿರುವ ಕೆಲಸದ ಬಗ್ಗೆ ಹೇಳು.
2. ನೀನು ಇದನ್ನು ಹೇಗೆ ಮಾಡಿದೆಯೆಂದು ಹೇಳುತ್ತೀಯಾ? ತೋರಿಸುತ್ತೀಯಾ?
3. ನೀನು ಚಿತ್ರಿಸಬೇಕೆಂದು / ಬರೆಯಬೇಕೆಂದು / ಮಾಡಬೇಕೆಂದು ಏಕೆ ನಿರ್ಧರಿಸಿದೆ?
4. ನೀನು ಇದನ್ನು ಚಿತ್ರಿಸುವಾಗ/ಬರೆಯುವಾಗ/ಮಾಡುವಾಗ ಏನನ್ನು ಯೋಚಿಸುತ್ತಿದ್ದೆ?
5. ಇದರ ಬಗ್ಗೆ ನಿನಗೇನು ಇಷ್ಟವಾಗುತ್ತದೆ?

ಕಾಲಕಾಲಕ್ಕೆ, ಶಿಕ್ಷಕರು ಮಗುವಿನ ಹಳೆಯ ಕೆಲಸವೊಂದಕ್ಕೆ ಹಿಂದಿರುಗಿ ಅದನ್ನು ಸುಧಾರಿಸಲು ಅಥವಾ ಬೇರೆ ರೀತಿಯಲ್ಲಿ ಮಾಡುವಂತೆ ಹೀಗೆ ಕೇಳಬಹುದು:

1. ಇದರಲ್ಲಿ ನಿನಗೆ ಏನಾದರೂ ಬದಲಿಸಲಿಕ್ಕಿದೆಯಾ?
2. ನೀನು ಇದನ್ನು ಮತ್ತೆ ಮಾಡುವುದಾದರೆ ಏನನ್ನು ಬೇರೆ ರೀತಿಯಲ್ಲಿ ಮಾಡುವೆ?

## ಕೃತಿಸಂಪುಟಗಳ ಉಪಯೋಗ

ಒಂದು ಸಲ ಮಗುವೊಂದರ ಕೃತಿಸಂಪುಟ ವ್ಯವಸ್ಥಿತವಾಗಿ ಜೋಡಣೆಗೊಂಡರೆ, ಶಿಕ್ಷಕರು ಮಗುವಿನ ಸಾಧನೆಗಳನ್ನು ಮೌಲ್ಯಮಾಪನ ಮಾಡಬಹುದು. ಸಮರ್ಪಕವಾದ ಮೌಲ್ಯಮಾಪನವು ಮಗುವಿನ ಈಗಿನ ಕೆಲಸವನ್ನು ಅದರ ಹಿಂದಿನ ಕೆಲಸಕ್ಕೆ ಹೋಲಿಸಿ ನೋಡುತ್ತದೆ. ಈ ಮೌಲ್ಯಮಾಪನವು ಪಠ್ಯಕ್ರಮ ಮತ್ತು ಸೂಕ್ತ ಬೆಳವಣಿಗೆಯ ಅಪೇಕ್ಷೆಗಳ ದಿಕ್ಕಿನಲ್ಲಿ ಮಗುವಿನ ಪ್ರಗತಿಯನ್ನು ಸೂಚಿಸಬೇಕು. ಉದಾಹರಣೆಗೆ, ಶಿಕ್ಷಕರೊಬ್ಬರು ಮಗುವೊಂದರ ಕಲಾಕೃತಿಯನ್ನು ಅವಲೋಕಿಸಿದ ಆಧಾರದ ಮೇಲೆ ಅದಕ್ಕೆ ಸೂಕ್ಷ್ಮ ಚಾಲನಾ ಕೌಶಲ (ಹಿಡಿತ ಮತ್ತು ನಿಯಂತ್ರಣ) ಇಲ್ಲದಿರುವುದನ್ನು ಗಮನಿಸಿದರು. ಇದು ಶಿಕ್ಷಕರು ಆ ಮಗುವಿಗೆ ಗುರಿಯೊಂದನ್ನು ನಿಯೋಜಿಸಲು ಸಹಾಯ ಮಾಡಿತು ಮತ್ತು ಆ ಮಗುವಿಗೆ ನಿರಂತರವಾದ ಸುದೀರ್ಘ ಕರಿಹಲಗೆಯ ಮೇಲೆ ಹೆಚ್ಚು ಸಲ ಮುಕ್ತವಾಗಿ ಚಿತ್ರಿಸುವುದರ ಮೂಲಕ ಮತ್ತು ಶಿಕ್ಷಕರು ಹಾಳೆಯ ಮೇಲೋ ನೆಲದ ಮೇಲೋ ಆಕಾರವೊಂದರ ಬಾಹ್ಯರೇಖೆಯ ಸುತ್ತ ಬೀಜಗಳನ್ನಿಟ್ಟರೆ ಮಗು ಆ ಆಕಾರದ ಒಳಗೆ ಚಿತ್ರಿಸುವ ಮೂಲಕ ಸುಧಾರಿಸಲು ಹೆಚ್ಚಿನ ಅವಕಾಶಗಳನ್ನು ಒದಗಿಸಲಾಯಿತು. ಮಗುವಿನ ಸೂಕ್ಷ್ಮ ಚಾಲನಾ ಕೌಶಲವು ಒಂದು ಕಾಲಾವಧಿಯಲ್ಲಿ ಅದೇ ರೀತಿಯ ಕಲಾಕೃತಿಯನ್ನು ಚಿತ್ರಿಸುವಾಗ ಸುಧಾರಿಸಿರುವುದು ಕಂಡುಬಂದಿತು.

ಕೃತಿಸಂಪುಟಗಳು ಮಕ್ಕಳನ್ನು ಒಬ್ಬರೊಂದಿಗೆ ಇನ್ನೊಬ್ಬರನ್ನು ಹೋಲಿಸಿ ನೋಡುವುದಕ್ಕಿರುವುದಲ್ಲ. ಅವು ಒಂದು ಪ್ರತ್ಯೇಕ ಮಗುವಿನ ಪ್ರಗತಿಯನ್ನು ಒಂದು ಕಾಲಾವಧಿಯಲ್ಲಿ ದಾಖಲಿಸುತ್ತವೆ. ಮಗುವೊಂದರ ಸಾಧನೆ, ಸಾಮರ್ಥ್ಯಗಳು, ಶಕ್ತಿಗಳು, ದೌರ್ಬಲ್ಯಗಳು ಮತ್ತು ಅವಶ್ಯಕತೆಗಳ ಮೇಲಿನ ಶಿಕ್ಷಕರ ನಿರ್ಣಯಗಳು ಕೃತಿಸಂಪುಟದ ದತ್ತಾಂಶ ದಾಖಲಿಸಿದಂತೆ, ಮತ್ತು ಶಿಕ್ಷಕರಿಗಿರುವ ಪಠ್ಯಕ್ರಮದ ಜ್ಞಾನವನ್ನು ಮತ್ತು ಬೆಳವಣಿಗೆಯ ಹಂತಗಳನ್ನು ಆಧರಿಸಿ, ಆ ಮಗುವಿನ ಬೆಳವಣಿಗೆಯ ಸಂಪೂರ್ಣ ಶ್ರೇಣಿಯನ್ನು ಹೊಂದಿರಬೇಕು. ಈ ಕೃತಿಸಂಪುಟವು ಶಿಕ್ಷಕರಿಗೆ ಪ್ರತಿಯೊಂದು ಮಗುವಿನ ಅನನ್ಯ ಗುಣಲಕ್ಷಣಗಳನ್ನು ಮತ್ತು ಕಲಿಯುವ ರೀತಿಗಳನ್ನು ಗುರುತಿಸಲು ಮತ್ತು ಇದನ್ನು ಬಳಸಿ ತರಗತಿಯಲ್ಲಿ ಮಗುವಿನ ಕಲಿಕೆಗೆ ಬೆಂಬಲ ನೀಡಲು ಸಹಾಯ ಮಾಡುತ್ತದೆ.

ಪಾಲಕ–ಶಿಕ್ಷಕರ ಭೇಟಿಯ ಸಂದರ್ಭದಲ್ಲಿ ಈ ಕೃತಿಸಂಪುಟವನ್ನು ಚರ್ಚೆಯ ಆಧಾರವನ್ನಾಗಿ ಇಟ್ಟುಕೊಂಡು, ಶಿಕ್ಷಕರು ಮತ್ತು ಪಾಲಕರು ಅಮೂರ್ತ ರೀತಿಯಲ್ಲಿ ಮಗುವಿನ ಪ್ರಗತಿಯನ್ನು ಚರ್ಚಿಸಲು ಪ್ರಯತ್ನಿಸುವುದಕ್ಕಿಂತ ಮಗುವಿನ ಕೆಲಸದ ಘನ ಉದಾಹರಣೆಗಳನ್ನು ವಿಶ್ಲೇಷಿಸಬಹುದು.

1. ಕೃತಿಸಂಪುಟವು ಮಗುವಿನ ಸಾಧನೆಗಳ ಬಗೆಗಿನ ಮೌಲ್ಯಯುತ ಮಾಹಿತಿಯನ್ನು ಪಾಲಕರು, ಕುಟುಂಬದ ಇತರ ಸದಸ್ಯರು ಮತ್ತು, ಭವಿಷ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರೊಂದಿಗೆ ಹಂಚಿಕೊಳ್ಳಲು ಅನುವು ಮಾಡಿಕೊಡುತ್ತದೆ.

2. ಈ ಕೃತಿಸಂಪುಟವು ಶಾಲಾ ಪೂರ್ವ ಹಂತದಿಂದ ಪ್ರಾಥಮಿಕ ಶಾಲೆಗೆ ಸರಾಗವಾದ ಬದಲಾವಣೆಗೆ ಇಂಬು ಕೊಡುತ್ತದೆ. ಇದು ಮಗುವೊಂದರ ಬೆಳವಣಿಗೆಯ ಸಮಗ್ರ ನೋಟವನ್ನು ಒದಗಿಸಿಕೊಡುವುದಲ್ಲದೇ ಪ್ರತಿ ಮಗುವಿನ ಪ್ರತ್ಯೇಕ ಅಗತ್ಯಗಳಿಗೆ ಹೊಂದುವಂತೆ ಶೈಕ್ಷಣಿಕ ಮತ್ತು ಆರೈಕೆಯ ರೂಢಿಗಳನ್ನು ಖಚಿತಪಡಿಸುವಲ್ಲಿ ಸಹಾಯ ಮಾಡುವುದರಿಂದ ಇಸಿಇಯಲ್ಲಿ ಇದೊಂದು ಅತ್ಯಮೂಲ್ಯ ಸಾಧನವಾಗಿದೆ.

3. ಈ ಕೃತಿಸಂಪುಟವು ಅಂಗನವಾಡಿ ಕೇಂದ್ರದ/ ಶಾಲಾ ಪೂರ್ವ ತರಗತಿಗಳಲ್ಲಿ, ಮನೆಯಲ್ಲಿ ಮತ್ತು ಸಮುದಾಯದಲ್ಲಿ ಮಗುವಿನ ಸಾಧನೆಯ ಸಕಾರಾತ್ಮಕ ಹೇಳಿಕೆಯಾಗಿದೆ.

4. ಮಕ್ಕಳ ಕೃತಿಸಂಪುಟಗಳು ಮಕ್ಕಳ ಶಿಕ್ಷಣ ಮತ್ತು ಬೆಳವಣಿಗೆಯಲ್ಲಿ ಅವರ ಪಾಲಕರನ್ನು ತೊಡಗಿಸುವ ಅರ್ಥಪೂರ್ಣ ರೀತಿಯಾಗಬಲ್ಲವು.



*Figure 1. Children's portfolio bags in a classroom.*

## ಶಿಕ್ಷಕರ ಪಾತ್ರ

ಶಿಕ್ಷಕರು ಮೌಲ್ಯಮಾಪನದ ಸೂಕ್ತ ವಿಧಾನಗಳನ್ನು ನ್ಯಾಯಯುತವಾಗಿ ಆರಿಸಿಕೊಳ್ಳುವ ಮತ್ತು ಮೌಲ್ಯಮಾಪನ–ಸಂಬಂಧಿ ದಾಖಲೀಕರಣದ ಆವರ್ತತೆಯನ್ನು ಆಯ್ಕೆಮಾಡುವ ಸ್ವಾಯತ್ತತೆಯನ್ನು ಹೊಂದಿರಬೇಕು. ಈ ಸ್ವಾಯತ್ತತೆ ಬಹು ಮುಖ್ಯವಾದುದು, ಅದರೊಡನೆ ಮಕ್ಕಳ ಮೌಲ್ಯಮಾಪನದ ವ್ಯವಸ್ಥಿತ ದಾಖಲೀಕರಣವನ್ನು ಸಹ, ಶಿಕ್ಷಕರ ಮೇಲೊಂದು ಹೊರೆಯ ವಿಷಯವಾಗದೆ ಅವರ ವೃತ್ತಿಪರ ಜವಾಬ್ದಾರಿಯ ಮುಖ್ಯ ಭಾಗವನ್ನಾಗಿ ನೋಡಬೇಕು. ನಿಖರವಾದ ಒಂದು ಮೌಲ್ಯಮಾಪನವು ಆರಂಭಿಕ ಬಾಲ್ಯದ ಶಿಕ್ಷಕರಿಗೆ ಮಗುವಿನ ಪ್ರಗತಿಯನ್ನು ಆ ಮಗುವಿಗೆ, ಅದರ ಕುಟುಂಬಕ್ಕೆ, ಶಿಕ್ಷಕರಿಗೆ ಮತ್ತು ಆಡಳಿತಗಾರರಿಗೆ ಅನುಕೂಲಕರವಾಗುವಂತೆ ಸೂಚಿಸಲು ಅನುವು ಮಾಡಿಕೊಡುತ್ತದೆ. ಹಾಗಾಗಿ ಶಿಕ್ಷಕರು ಈ ಕೆಳಕಂಡಂತೆ ಮಾಡಬೇಕಾಗುತ್ತದೆ:

1. ಮನೆಗಳಿಗೆ ಭೇಟಿ ನೀಡಿ ಪ್ರತಿ ಮಗುವಿನ ಬಗ್ಗೆಯೂ ಪಾಲಕರಿಂದ ಸಂಪೂರ್ಣ ವಿವರಗಳನ್ನು ಪಡೆದು–ಕೊಳ್ಳಬೇಕು.

2. ವ್ಯವಸ್ಥಿತವಾಗಿ ವ್ಯಕ್ತಿವಿವರದ ಹಾಳೆಯನ್ನು ತಯಾರಿಸಿ, ಪ್ರತಿ ಮಗುವಿಗೂ ಕೆಲಸದ ಮಾದರಿಗಳನ್ನು ಸಂಗ್ರಹಿಸಬೇಕು.

3. ಎಲ್ಲಾ ಮಕ್ಕಳಿಗೂ ಸಮಾನ ಅವಕಾಶಗಳನ್ನು ದೊರಕಿಸಿಕೊಡಬೇಕು.

4. ಮಕ್ಕಳಿಗೆ ಚಟುವಟಿಕೆಗಳನ್ನು ಮಾಡಲು ಅವಶ್ಯಕವಾದ ಸಾಮಗ್ರಿಗಳು ಮತ್ತು ಸಮಯವನ್ನು ಕೊಡಬೇಕು. ಮತ್ತು ಒಂದು ಕಾಲಾವಧಿಯೊಳಗೆ ಒಂದು ಸಾಮರ್ಥ್ಯದಲ್ಲಿ ಉಂಟಾದ ಪ್ರಗತಿಯನ್ನು ಅಳೆಯಲು ಅವರು ಈಗಾಗಲೇ ಮಾಡಿದ ಕೆಲಸವನ್ನು ವಿಸ್ತರಿಸುವ ಅವಕಾಶವನ್ನೂ ಸಹ ಒದಗಿಸಬೇಕು.

5. ಮಕ್ಕಳ ಚಟುವಟಿಕೆಗಳನ್ನು ಗಮನಿಸಿ, ಅವುಗಳನ್ನು ಪರಿಶೀಲನಾ ಪಟ್ಟಿಗಳು (check lists), ಉಪಾಖ್ಯಾನಗಳು ಮತ್ತು ಕಾರ್ಯಕ್ರಮ ಮಾದರಿ ಇತ್ಯಾದಿಗಳ ರೂಪದಲ್ಲಿ ದಾಖಲಿಸಿಡಬೇಕು ಮತ್ತು ಮಕ್ಕಳ ಬೆಳವಣಿಗೆಗೆ ಅಗತ್ಯವಾದ ಯೋಜನೆಗಳನ್ನು ಹಾಕಿಕೊಳ್ಳಬೇಕು.

6. ಪ್ರತಿ ಮಗುವಿನ ಬಗೆಗೆ ಅವರಿಗುಂಟಾದ ಪರ್ಯಾ–ಲೋಚನೆಗಳನ್ನು ದಾಖಲಿಸಿ, ಅವುಗಳನ್ನು ಗಮನದಲ್ಲಿಟ್ಟು–ಕೊಂಡು ಅವರ ತರಗತಿಗಳನ್ನು ಯೋಜಿಸಬೇಕು.

## ಪರಿಸಮಾಪ್ತಿ

ಕೃತಿಸಂಪುಟಗಳು ಪ್ರತಿ ಮಗುವಿನ ಪ್ರಗತಿಯನ್ನು ದಾಖಲಿಸಲು ಮತ್ತು ಅಂಗೀಕರಿಸುವಲ್ಲಿ ಆರಂಭಿಕ ಬಾಲ್ಯ ವೃತ್ತಿಪರರಿಗೆ ಪ್ರಯೋಜನಕಾರಿ, ಪರಿಣಾಮಕಾರಿ ಸಾಧನಗಳಾಗಿವೆ. ಅವು ಪ್ರತಿ ಮಗುವಿಗೂ ಅನನ್ಯವಾಗಿದ್ದು, ಅವುಗಳ ಸಾಮಗ್ರಿಗಳು ಮಕ್ಕಳು ತಮ್ಮ ಪರಿಸರ, ಸಾಮಗ್ರಿಗಳು, ಸಹಪಾಠಿಗಳು ಮತ್ತು

ಶಿಕ್ಷಕರೊಡನೆ ನಡೆಸುವ ನಿರ್ದಿಷ್ಟ ಸಂವಹನದ ಮೇಲೆ ಕೇಂದ್ರೀಕೃತಗೊಳ್ಳಬಹುದು. ಕೃತಿಸಂಪುಟಗಳು ವರದಿ ಮಾಡುವ ಮತ್ತು ಯೋಜಿಸುವ ಈ ಎರಡೂ ಸಾಧನಗಳಾಗಿ ಕಾರ್ಯಸಾಧ್ಯತೆಯುಳ್ಳವು ಮತ್ತು ಪ್ರಯೋಜನಕಾರಿಯಾಗಿವೆ; ಅವುಗಳ ಸ್ವರೂಪ ಮತ್ತು ವ್ಯವಸ್ಥೆಯ ಶೈಲಿಗಳು ಎಳೆಯ ಮಕ್ಕಳಿಗೋಸ್ಕರ ಇರುವ ಹಲವು ವಿಧದ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಹೊಂದಿಕೊಳ್ಳುವಂತಿವೆ. ಈ ವ್ಯವಸ್ಥಿತ ಪ್ರಕ್ರಿಯೆಯು ತಳಹದಿಯ ಹಂತದ ಅಂತ್ಯದಲ್ಲಿ ಮಕ್ಕಳಿಗೋಸ್ಕರ ಇರುವ ಪಠ್ಯಕ್ರಮದ ಗುರಿಗಳನ್ನು ಸಾಧಿಸುವಲ್ಲಿ ಶಿಕ್ಷಕರಿಗೆ ಮತ್ತು ಮಕ್ಕಳ ಮುಂದಿನ ಹಂತಕ್ಕೆ ಸರಾಗವಾದ ಬದಲಾವಣೆಗೂ ಸಹ ಪ್ರಯೋಜನಕಾರಿಯಾಗಿದೆ.

**ಅಂತಿಮ ಟಿಪ್ಪಣಿ**

I ರಾಷ್ಟ್ರೀಯ ಶಿಕ್ಷಣ ನೀತಿ 2020. ಮಕ್ಕಳ ಬೆಳವಣಿಗೆಗಾಗಿ ಮೌಲ್ಯಮಾಪನದ ಪರಿವರ್ತನೆ. ಪ್ಯಾರಾ 4.35. ಪು 17



**ಎಂ ಶ್ರೀನಿವಾಸ ರಾವ್** ಅವರು ತೆಲಂಗಾಣದ ಅಜೀಂ ಪ್ರೇಮ್‌ಜಿ ಸಂಸ್ಥೆಯ ರಾಜ್ಯ ಮಟ್ಟದ ಮುಖ್ಯಸ್ಥರಾಗಿದ್ದಾರೆ. 2004ರಿಂದಲೂ ಈ ಸಂಸ್ಥೆಯೊಂದಿಗಿರುವ ರಾವ್ ಅವರು ಆರಂಭಿಕ ಹಂತದ ಬೃಹತ್ ಪ್ರಮಾಣದ ಉಪಕ್ರಮಗಳ ಭಾಗವಾಗಿದ್ದರು. ಸಂಗಾರೆಡ್ಡಿ ಮತ್ತು ರಾಜ್ಯಾದ್ಯಂತ ಆರಂಭಿಕ ಬಾಲ್ಯ ಶಿಕ್ಷಣ (ECE) ಯೋಜನೆಯನ್ನು ಮುನ್ನಡೆಸಿದ್ದಾರೆ. ಅಲ್ಲದೆ ಅವರು ಪ್ರಸ್ತುತ ಫೌಂಡೇಷನ್‌ನ ಹಸ್ತಕ್ಷೇಪ ಪರಿಣಾಮ ಮಾಪನದ ಕೆಲಸವನ್ನು ಮುನ್ನಡೆಸುತ್ತಿದ್ದಾರೆ. ಶ್ರೀನಿವಾಸ ರಾವ್ ಅವರನ್ನು msr@azimpremjifoundation.org ಮೂಲಕ ಸಂಪರ್ಕಿಸಬಹುದು.